# ಅವಳ ಕಿಚ್ಚು



ರಗರಗನೆ ಅವಳ ಒಳಗುದಿಯ ಜೊತೆ ಒಲೆ ಉರಿಯುತ್ತಿತ್ತು. ಕೂತರೊಡನೆ ಅನ್ನ ಅವಳ ಮನದ ಜೊತೆ ಕುದಿಯುತ್ತಿತ್ತು. ಬೆವರ ಜೊತೆ ಅನ್ನ ಬಸಿದು ಕಿರು ಒಲೆಯತ್ತ ಇಟ್ಟು ಬೇಳೆ ಬೆಂದಿದೆಯೊ ಇಲ್ಲವೊ ಎಂದು ನೋಡಿದಳು. ಅವಳ ಸಂಕಟ ಆಗಾಗ ಉಕ್ಕಿ ಬರುತ್ತಿತ್ತು. ಅಲ್ಲಲ್ಲೇ ಅದನು ತಗ್ಗಿಸುತ್ತಲೇ ಇದ್ದಳು. ಬೆಂದ ಅನ್ನದ ಗಮಲು ಪರಿಮಳಿಸುತ್ತಿತ್ತು. ಅವಳ ಕಣ್ಣಲ್ಲಿ ತಣ್ಣಗೆ ಬೆಂಕಿಯ ಉರಿ ಮಿನುಗುತ್ತಿತ್ತು. ಕಾರ ಅರೆಯತೊಡಗಿದಳು. ಅವಳ ಒಡಲುರಿಯು ಕಾರದಲಿ ಬೆರೆತು ಸೊಪ್ಪೆಸರು ಸಾರು ರಸವಾಗಿ ಮನೆಯೆಲ್ಲ ಘಮ್ಮೆಂದಿತು.

ಹಜಾರದ ತುಂಬ ಹಸಿದವರೆಲ್ಲ ಬಂದು ಕೂತರು. ಹಿಂಡು ಮಂದಿಯ ಮುಂದೆ ದೇಹವನು ಬೇಯಿಸಿ ಬಸಿದು ತಂದಂತೆ ಒಬ್ಬೊಬ್ಬರ ತಟ್ಟೆಗಳಿಗೂ ಆಕೆ ಬಡಿಸಿದಳು. ಅವಳು ಮಾಡಿದ ಆ ಅಡುಗೆಯಲಿ ಸಾವಿರಾರು ವರ್ಷಗಳ ಹೆಂಗಸರ ಕಣ್ಣೀರಿನ ಉಪ್ಪಿನ ರುಚಿಯಿತ್ತು. ಸವೆದ ಕೈಗಳ ಸವಿಯಿತ್ತು. ಅನ್ನದ ಹೊಕ್ಕುಳ ಬಳ್ಳಿಯಿತ್ತು. ಉಣ್ಣುವವರು ಬಹಳ ಕಾಲದಿಂದ ಹಾಗೇ ಮೈಮರೆತಿದ್ದರು. ಇನ್ನೂ ಬೇಕೆಂದು ಮಕ್ಕಳು ಕೇಳುತ್ತಲೇ ಇದ್ದರು. ಕಾಲಾಂತರದ ಉಣ್ಣುವ ಸರದಿ ಸಾಗಿಯೇ ಇತ್ತು. ಆಕೆ ಬಡಿಸುತ್ತಲೇ ಇದ್ದಳು.

ವಿಪರ್ಯಾಸ ಎಂದರೆ, ಮಾಡಿ ಬಡಿಸಿದವರು ಉಂಡರೇ, ತಿಂದರೇ, ಬರಿದೆ ಗಾಳಿ ಕುಡಿದು ಮಲಗಿದರೇ ಎಂದಾದರೂ ಯಾರೂ ಕೇಳುತ್ತಿರಲಿಲ್ಲ. ಹಾಗೆ ಬೆಂದು ಹದವಾಗಿ ಜೀವರಸವಾದ ಅನ್ನದಲ್ಲಿ ಅವಳ ನಿಟ್ಟುಸಿರು, ಏಕಾಂತ, ನೋವು, ಉಣ್ಣುವವರ ಗಮನಕ್ಕೇ ಬರಲಿಲ್ಲ. ಅವಳ ವ್ಯಕ್ತಿತ್ವವೇ ಒಂದು ಅಡುಗೆ ಮನೆಯ ಒಲೆಯಾಗಿತ್ತು. ಉರಿಯಾಗಿತ್ತು, ಜೀವವಾಗಿತ್ತು. ಎಲ್ಲ ಬಗೆಯ ಎಲ್ಲರ ಹಸಿವಿಗೂ ಅನ್ನ ನೀಡುವ ಭೂಮಿಯಾಗಿತ್ತು.